
ಅನುಮಾನವೂ ಬಂತು.

ಲಂಚ್ ಬ್ರೇಕ್‌ನ ನಂತರ ಅದೆಷ್ಟು ಕೆಲಸದಲ್ಲಿ ವ್ಯಸ್ತಳಾದಳೆಂದರೆ... ಮನೆ, ಗಂಡ, ಮಗು, ಅತ್ತೆ, ರಾಗಿಣಿ ಯಾರ ನೆನಪೂ ಬರಲಿಲ್ಲ. ಒಂದೆರಡು ಕ್ಲಯಿಂಟ್ ಮೀಟಿಂಗ್‌ಗಳೂ ಇತ್ತು. ಎರಡನೇ ಕ್ಲಯಿಂಟ್ ಮೀಟಿಂಗಿನ ನಂತರ ಪ್ರಿಯಾ ಹೌಹಾರಿ ಹೋದಳು. ಸಂದೀಪ್ ಕೊಟ್ಟ ಗೈಡ್ ಲೈನ್‌ನಲ್ಲಿ ಕೆಲಸ ಮಾಡುತ್ತಿದ್ದ ಪ್ರಿಯಾ ಈಗ ಕೆಲವು ಹೊಸ ಮಾರ್ಪಾಡು ಮಾಡಬೇಕಾಯಿತು. ಸಂದೀಪನಿಗೆ ಹೇಳಿದಾಗ 'ಹೌದ?



ಹಾಗಾಗಬೇಕಂತ? ಓ ಶಿಟ್. ಸರಿ ಏನು ಮಾಡಕ್ಕಾಗುತ್ತೆ ವಿ ವ್ಯಾವ್ ಟು ಕೋಪ್ ಅಪ್ ವಿತ್ ಇಟ್. ಯಾತಕ್ಕು ನಾನೊಮ್ಮೆ ಮಾತಾಡಿ ಹೇಳ್ತೀನಿ' ಎಂದ ಕಾಲು ಗಂಟೆಯಲ್ಲೇ ಫೋನ್ ಮಾಡಿ 'ಪ್ರಿಯಾ, ಅವರು ಹೇಳಿದಂತೆಯೇ ಆಗಬೇಕಿದೆ. ನೀನು ಶುರುವಿನಿಂದ ಬದಲಾವಣೆ ಮಾಡಬೇಕಾಗುತ್ತೆ. ಇನ್ನು ಎರಡು ದಿನ ಟೈಮ್ ತಗೊಂಡಿದೀನಿ. ಯೂಕ್ಯಾನ್ ಗೋ ಹೋಮ್ ಮನೆಯಿಂದಲೇ ವರ್ಕ್ ಮಾಡು ಲ್ಯಾಪ್‌ಟ್ಯಾಪ್ ತಗೊಂಡೋಗು' ಎಂದ ಉದಾರವಾಗಿ. ಮೂರು ತಿಂಗಳಿಂದ ಮಾಡುತ್ತಿದ್ದ, ಇನ್ನೇನು ಮುಗಿಯುವ ಹಂತದಲ್ಲಿದ್ದ ಪ್ರಾಜೆಕ್ಟ್ ಸಂಪೂರ್ಣ ಬದಲಾಯಿಸಲು ಎರಡು ದಿನ ಸಾಲದೆಂದು ಅವಳಿಗೆ ಮಾತ್ರವಲ್ಲ. ಸಂದೀಪ್‌ನಿಗೂ ಗೊತ್ತಿತ್ತು. ಆ ಕೆಲಸ ಬೇಡುವ ಪರಿಶ್ರಮ, ಕಾಲ, ಅದರಿಂದ ಮನೆಯಲ್ಲಾಗುವ ಕಿರಿಕಿರಿ ಎಲ್ಲದರ ಕಲ್ಪನೆಯಲ್ಲಿ ಅವಳ ತಲೆ ಗರ್ರನೆ ತಿರುಗಿ ಲ್ಯಾಪ್‌ಟ್ಯಾಪಿನ ಪರದೆಯ ಮೇಲಿನ ಯಾವ ಅಕ್ಷರಗಳೂ ಕಾಣಲಿಲ್ಲ. ಕಣ್ಣು ಕತ್ತಲಿಟ್ಟುಕೊಂಡಿತು. ಹಾಗೇ ಹಿಂಬದಿಗೆ ಕತ್ತು ವಾಲುತ್ತಾ, ಸೀಟಿಗೊರಗಿದಳು. ಇವಳನ್ನೆ ಗಮನಿಸುತ್ತಿದ್ದ ರೀಟಾ ಓಡಿ ಬಂದು 'ಏನಾಯ್ತು ಪ್ರಿಯಾ?' ಅಯ್ಯೋ... ಶೀ ಈಸ್ ಕೊಲಾಪ್ಸಿಂಗ್... ಯಾರಾದ್ರು ಬನ್ನಿ' ಅಂತ ಗದ್ದಲವೆಬ್ಬಿಸಿದಳು.

ಸಂದೀಪ್ ಡಾಕ್ಟರ್ ಕರೆಸಿದ. ಅವಳಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಡಾಕ್ಟರ್ ಕೆಲ ಪರೀಕ್ಷೆಗಳನ್ನು ಮಾಡಿದರು. ಯಾವುದಕ್ಕೂ ಸಮರ್ಪಕ ಉತ್ತರ ಕೊಡದೆ ಕಳಾಹೀನವಾದ ಕಣ್ಣುಗಳಿಂದ ಸುಮ್ಮನೆ ನೋಡುತ್ತಿದ್ದವಳನ್ನೇ ನೋಡಿದ ಡಾಕ್ಟರ್ 'ದಿಸ್ ಈಸ್ ಮೆಂಟಲ್ ಬ್ಲಾಕ್' ಎಂದರು. ಸಂದೀಪ್ ಗೊಂದಲಗೊಂಡು 'ಸೋ ವಾಟ್?' ಎಂದ. 'ಶೀ ನೀಡ್ಸ್ ರೆಸ್ಟ್ ಅಟ್ಲೀಸ್ಟ್ ಫಾರ್ ಎ ಮಂತ್' ಎಂದರು. 'ಶಿಟ್' ಎಂದ ಸಂದೀಪ ಹಲ್ಲು ಕಡಿದ.

ಆ ರಾತ್ರಿ ಮನೆಯಲ್ಲಿ 'ಇವಳು ಕೆಲಸಕ್ಕೆ ಹೋಗೋದೂ ಸಾಕು, ಹಿಂಗೆ ಗುಬರಾಕ್ಕೊಂಡು ಮಲ್ಕೋಳೋದು ಸಾಕು. ಅತ್ಲಾಗೆ ಕೆಲ್ಸ ಬಿಡಿಸಿಬಿಡು ಗೋಪು... ತಿಂದುಂಡುಕೊಂಡು ಹಾಯಾಗಿ ಮನೇಲಿ ಇರ್ಲಿ' ಎಂದ ತಾಯಿಯನ್ನು ಇರಿಯುವಂತೆ ನೋಡಿದ. ಮರುದಿನ ಅವಳನ್ನು ಕರೆದೊಯ್ಯಲು ಬಂದ ಅವಳ ತಂದೆ ತಾಯಿಯರ ಜೊತೆ 'ತುಂಬ ಸೂಕ್ಷ್ಮ. ಅವಳ ಜೊತೆ ಏಗೋಕೆ ಸಾಕಾಗುತ್ತೆ. ಒಂದಲ್ಲದಿದ್ರೆ ನಾಲ್ಕು ತಿಂಗಳು ನಿಮ್ಮನೇಲೇ ಇರ್ಲಿ. ಮಗುನ ನಾವೇ ನೋಡ್ಕೋತೀವಿ. ಹೇಗೂ ಅಮ್ಮಂಗೆ ನಿಧಿ ಚನ್ನಾಗಿ ಅಡ್ಜಸ್ಟ್ ಆಗಿದ್ದಾನೆ. ಅವಳು ಎಷ್ಟು ಕಾಲ ಬೇಕೋ ಅಷ್ಟು ನಿಮ್ಮನೇಲೆ ಇಟ್ಕೊಳ್ಳಿ. ಅವಳಿಗೆ ಯಾವಾಗ ಇಲ್ಲಿ ಬರಬೇಕು ಅನ್ನಿಸುತ್ತೋ ಅವಾಗ ಇಲ್ಲಿಗೆ ಬರ್ಲಿ' ಎಂದ ಗದ್ಗದಿತನಾಗಿ. ತಂದೆ ಮರುಕದಿಂದ ಮಗಳತ್ತ ನೋಡಿದರು. ಬಿರುಬಾನಿನಂತಿದ್ದ ಅವಳ ಮುಖದಲ್ಲಿ ಯಾವುದೇ ಭಾವಗಳಿರಲಿಲ್ಲ. ಶೂನ್ಯದಿಂದ ಎದ್ದು ಬಂದ ಕತ್ತಲಿನಂತಿದ್ದ ಅವಳ ಮುಖವನ್ನು ಕಳವಳದಿಂದ ನೋಡುತ್ತಿದ್ದ ತಾಯಿಯ ಕಣ್ಣಲ್ಲಿ ನೀರಿಳಿಯುತ್ತಿತ್ತು.

●